ಪ್ರಾಸಾಃ- 6 ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.8.2023

ಮುಂದು ವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ

ದಿಃ 28-7-2021 ರಂದು ವಿಮ್ಸ್ ಆಸ್ಪತ್ರೆಯಲ್ಲಿ ನಮ್ಮ ತಂದೆಯ ಶವ ಇದ್ದ ಕಾರಣ ಅಲ್ಲಿಗೆ ನಾನು ಮತ್ತು ನನ್ನ ತಾಯಿ (3 ನೇ ಆರೋಪಿ) ಬಂದಿದ್ದೆವು . ನನ್ನ ತಂದೆಯ ತಲೆಯ ಹಿಂಭಾಗ , ಎಡ ಕಿವಿಯ ಹತ್ತಿರ ಮತ್ತು ಮುಖ ಮತ್ತು ಬಟ್ಟೆಗಳಿಗೆ ರಕ್ತ ಹತ್ತಿತ್ತು . ಆ ಸಮಯದಲ್ಲಿ ಚಾಸಾ 4 ಮತ್ತು 5 ರವರು ಕೂಡ ಹಾಜರಿದ್ದರು . ಸಾಕ್ಷಿಗೆ ನಿಪಿ-8 ಫೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ ಮತ್ತು ನನ್ನ ತಂದೆಯ ಶವ ಪಂಚನಾಮೆ ಕಾಲಕ್ಕೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ .

ಈ ಮೊದಲು ನನ್ನ ತಂದೆ ಕೂಡ್ಲಿಗಿ ಹತ್ತಿರ ನಾಗಲಾಪುರ ಎಂಬ ಊರಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದರು ಮತ್ತು ನಮ್ಮ ಕಾರೈಕಲ್ ನಲ್ಲಿದ್ದ 4 ಎಕರೆ ಜಮೀನನ್ನು ಮಾರಾಟ ಮಾಡಿ ಅಲ್ಲಿ ನಾಗಲಾಪುರಕ್ಕೆ ವ್ಯವಸಾಯ ಮಾಡಲು ಹೋಗಿದ್ದರು .

ನಾಗಲಾಪುರದಲ್ಲಿ ನಮ್ಮ ತಂದೆ ನಾಗೇಶ್ವರಮ್ಮ ಎನ್ನುವವರ ಜೊತೆ ವಾಸ ಮಾಡಿಕೊಂಡಿದ್ದರು. ಆ ಕಾರಣಕ್ಕಾಗಿ ನನ್ನ ತಂದೆ ನಮ್ಮ ಹೊಲ ಮಾರಿರಬಹುದು ಎಂದು ಅನುಮಾನ ಪಟ್ಟಿದ್ದೆವು . ನಂತರ ನನ್ನ ತಾಯಿ 1 ನೇ ಆರೋಪಿ ಹಾಗೂ ಇತರರು ನಾಗಲಾಪುರಕ್ಕೆ ಹೋಗಿ ನನ್ನ ತಂದೆಯನ್ನು ವಾಪಾಸ್ಸು ಊರಿಗೆ ಬರುವಂತೆ ಕೇಳಿಕೊಂಡ ಕಾರಣ 1 ವರ್ಷದ ನಂತರ ಊರಿಗೆ ಬಂದು ನನ್ನ ತಾಯಿಯ ಜೊತೆ ವಾಸಮಾಡಿಕೊಂಡಿದ್ದನು . ನಮ್ಮ ತಂದೆ ಬಂದಾಗಿನಿಂದ ಮನೆಯಲ್ಲಿ ಸಣ್ಣ ಪುಟ್ಟ ಕಾರಣಗಳಿಗೆ ಜಗಳವಾಗುತ್ತಿದ್ದರಿಂದ ಮತ್ತು ನನ್ನ ಮದುವೆಯಾಗಿದ್ದರಿಂದ ನಾನು ನನ್ನ ಹೆಂಡತಿ ಬೇರೆ ಕಡೆ ಮನೆ ಮಾಡಿಕೊಂಡು ವಾಸವಾಗಿದ್ದೆವು . ಅದಾದ 9 ತಿಂಗಳು ನಂತರ ನನ್ನ ತಂದೆಯ ಕೊಲೆಯಾಗಿರುತ್ತದೆ .

ಪೊಲೀಸರು ಶವ ಪಂಚನಾಮೆ ಮತ್ತು ಶವ ಪರೀಕ್ಷೆಯ ನಂತರ ಶವವನ್ನು ನನ್ನ ತಾಬಾಕ್ಕೆ ಅಂತ್ಯ ಸಂಸ್ಕಾರಕ್ಕಾಗಿ ನೀಡಿರುತ್ತಾರೆ . ಸಾಕ್ಷಿಗೆ ಸದರಿ ಶವ ಸ್ವೀಕರಿಸಿದ ರಸೀದಿಯನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ರಸೀದಿಯನ್ನು ಈಗ ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು . ಶವ ಅಂತ್ಯ ಸಂಸ್ಕಾರ ಎಲ್ಲಾ ಮುಗಿಸಿದ ಮೇಲೆ ಪುನಃ ಪೊಲೀಸರು ನನ್ನನ್ನು ದಿಃ 30-7-2021 ರಂದು ಕರೆಸಿದ್ದರು . ನನಗೆ ಕೆಲವು ಫೋನ್ ನಂಬರ್

ಗಳನ್ನು ಹೇಳಿದಾಗ ನನ್ನ ತಂದೆ ಮತ್ತು ನನ್ನ ತಾಯಿ ಬಳಸುತ್ತಿದ್ದ ಫೋನ್ ನಂಬರ್ ಗಳನ್ನು ಗುರುತಿಸಿದೆನು , ಆದರೆ ಇನ್ನು ಎರಡು ನಂಬರ್ ಗಳು ಯಾರವು ಎಂದು ಆ ಕ್ಷಣದಲ್ಲಿ ಗೊತ್ತಾಗಲಿಲ್ಲ . ನನ್ನ ತಾಯಿ ಬಳಸುತ್ತಿದ್ದ ನಂಬರ್- 9164156927 ಇರುತ್ತವೆ , ನನ್ನ ತಂದೆ ಬಳಸುತ್ತಿದ್ದ ನಂಬರ್ -7204799533 ಇರುತ್ತವೆ .

ನಂತರ ಪೋಲಿಸರು ಶಿವ ಶಂಕರಪ್ಪ (ಆರೋಪಿ 1) ನನ್ನು ಕರೆದುಕೊಂಡು ಬಂದು ಯಾರು ಕೊಲೆ ಮಾಡಿರುತ್ತಾರೆ ಎಂದು ಆತನನ್ನು ಕೇಳಿದಾಗ ಆತ ನಾನು ಮತ್ತು ಆರೋಪಿ 2 ಆರೋಪಿ 3 ಹೇಳಿದ್ದಕ್ಕೆ ನನ್ನ ತಂದೆಯನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ . ಹೊಲ ಮಾಡಿದ್ದಕ್ಕೆ ಮತ್ತು ನನ್ನ ತಾಯಿಯನ್ನು ಕುಡಿದು ಬಡಿಯುತ್ತಿರುವುದಕ್ಕೆ ಕೊಲೆ ಮಾಡಿರುವುದಾಗಿ ಹೇಳಿರುತ್ತಾನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ .

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ವಿಭಾಗ ದಸ್ತಾವೇಜು ಅಗ್ರಿಮೆಂಟ್ ಆಗಿದ್ದು ಅದರಲ್ಲಿರುವ ಜಿ. ಮಲ್ಲಿಕಾರ್ಜುನ ಎಂದು ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿ ಇದು ನನ್ನ ತಂದೆಯ ಸಹಿ ಎಂದು ನುಡಿಯುತ್ತಾರೆ . ಅದು ಪಿತ್ರಾರ್ಜಿತ ಆಸ್ತಿಯಲ್ಲಿ ಆಸ್ತಿಗಳ ವಿಭಾಗ ಮಾಡಿಕೊಂಡ ಬಗ್ಗೆ ಇರುತ್ತದೆ . ಸದರಿ ದಾಖಲೆಯು ಜೆರಾಕ್ಸ್ ಪ್ರತಿ ಇರುವುದರಿಂದ ಅದನ್ನು ನಿಶಾನೆಗೊಳಿಸಿರುವುದಿಲ್ಲ .

ನನ್ನ ತಂದೆ ಹೆಸರಿಗೆ ಮಾರುತಿ ಕ್ಯಾಂಪ್ ನಲ್ಲಿ ಭೂಮಿ ಇದ್ದ ಬಗ್ಗೆ ನಾನು ಪಹಣಿ ಪತ್ರಿಕೆ ಯನ್ನು ಹಾಜರು ಪಡಿಸಿದ್ದು ಅದು ಸರ್ವೆ ನಂಃ 372 ಕ್ಕೆ ಸಂಬಂಧಿಸಿದ್ದು ಸದರಿ ಪಹಣಿ ಪತ್ರಿಕೆಯನ್ನು ಈಗ ನಿಪಿ-10 ಎಂದು ಗುರುತಿಸಲಾಯಿತು .

<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ವೈ ಕೆ ವಕೀಲರಿಂದಃ</u>

ಈ ಘಟನೆಯ ಸುಮಾರು 9 ತಿಂಗಳ ಪೂರ್ವದಿಂದ ನಾನು ನನ್ನ ಕುಟುಂಬ ನನ್ನ ತಂದೆ ತಾಯಿರವರಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೆ . ನಾನು ಈ ಘಟನೆಯನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ . ಪೊಲೀರು ಕರೆದ ಮೇರೆಗೆ ನಾನು ವಿಮ್ಸ್ ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿ . ನನ್ನ ತಂದೆ ನಾಗಲಾಪುರ ವಾಸವ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಪೊಲೀಸರು ಹೇಳಿಕೊಟ್ಟ ರೀತಿಯಲ್ಲಿ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ತಂದೆಯ ಸಾವಿಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ .

<u>ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ. ಎಸ್ ಆರ್ ಎಸ್ ವಕೀಲರಿಂದಃ</u>

ಆರೋಪಿಗಳ ವಿರುದ್ದ ನಾನು ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿ . ನನ್ನ ಮೃತ ತಂದೆಗೆ ಓರ್ವ ನಾಗೇಶ್ವರಮ್ಮ ರವರ ಜೊತೆ ಅನೈತಿಕ ಸಂಬಂಧ ಇತ್ತು ಎಂದರೆ ಸರಿ . ಸದರಿ ಅನೈತಿಕ ಸಂಬಂಧದ ಸಲುವಾಗಿ ನನ್ನ ತಂದೆ ಅವನಿಗೆ ಸೇರಿದ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿದ್ದರು ಎಂದರೆ ಸರಿ . ಅನೈತಿಕ ಸಂಬಂಧ ಇದ್ದ ಕಾರಣ ನನ್ನ ತಂದೆ ಮತ್ತು 3 ನೇ ಆರೋಪಿಯ ನಡುವೆ ಅಷ್ಟಾಗಿ ಹೊಂದಾಣಿಕೆ ಇರಲ್ಲಿ ಎಂದರೆ ಸರಿ . ಈ ಕಾರಣದಿಂದ ನಾನು ಮತ್ತು ನನ್ನ ಕುಟುಂಬದವರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೆವು ಎಂದರೆ ಸರಿ . ನನ್ನ ತಂದೆ ನಾಗೇಶ್ವರಮ್ಮ ರವರ ಜೊತೆ ಸಂಸಾರ ಮಾಡಿಕೊಂಡು ವಾಸ ಇದ್ದರು ಎಂದರೆ ಸರಿ .

ಈ ಘಟನೆಯ ಸುಮಾರು 4 ವರ್ಷಗಳ ಪೂರ್ವದಿಂದ ನನ್ನ ತಂದೆ ಮತ್ತು ನಾಗೇಶ್ವರಮ್ಮ ಕೂಡ್ಲಿಗಿ ತಾಲ್ಲೂಕಿನ ನಾಗಲಾಪುರ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಈ ಘಟನೆಯ ಪೂರ್ವದಲ್ಲಿ ನನ್ನ ತಂಗಿಯಂದಿರಾದ ಶಂಕರಮ್ಮ ಮತ್ತು ಬಸಮ್ಮ ರವರ ಮದುವೆ ಆಗಿತ್ತು ಎಂದರೆ ಸರಿ . ಸಾಕ್ಷಿ ಮುಂದು ವರೆದು ನನ್ನ ತಂದೆ ಮೃತ ಪಡುವ 9 ತಿಂಗಳುಗಳ ಪೂರ್ವದಿಂದ ನನ್ನ ತಂದೆ ಮತ್ತು 3 ನೇ ಆರೋಪಿ ಒಟ್ಟಿಗೆ ಮಾರುತಿ ಕ್ಯಾಂಪ್ ನ ನಮ್ಮ ಮನೆಯಲ್ಲಿ ವಾಸ ಇದ್ದರು ಎಂದು ನುಡಿಯುತ್ತಾರೆ . ನನ್ನ ತಂದೆ ತಾಯಿ ಒಟ್ಟಿಗೆ ಇದ್ದ ಕಾರಣ ನಾಗೇಶ್ವರಮ್ಮಳಿಗೆ ನನ್ನ ತಂದೆಯ ವಿರುದ್ಧ ಕೋಪ ಇತ್ತು ಎಂದರೆ ನನಗೆ ಗೊತ್ತಿಲ್ಲ .

ದಿಃ 28-7-2021 ರಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ . ಸದರಿ ಹೇಳಿಕೆಯಲ್ಲಿ ನನಗೆ ನಾಗೇಶ್ವರಮ್ಮ ರವರ ಮೇಲೆ ಕೊಲೆ ಮಾಡಿರುವ ಅನುಮಾನ ಇದೆ ಎಂದು ಹೇಳಿ ಬರೆಸಿದ್ದೆ ಎಂದರೆ ಸರಿ .

ನಾನು ನನ್ನ ತಂದೆ ಕೊಲೆಯಾದುದನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ . ನನ್ನ ತಂದೆಗೆ ಕುಡಿತದ ಅಭ್ಯಾಸ ಮತ್ತು ಅನೈತಿಕ ಸಂಬಂಧ ಇದ್ದರೂ ಸಹ ನನ್ನ ತಾಯಿ ಅದನ್ನು ಸಹಿಸಿಕೊಂಡು ಅವರೊಂದಿಗೆ ಅನ್ಯೋನ್ಯವಾಗಿ ಸಂಸಾರ ಮಾಡುತ್ತಿದ್ದರು ಎಂದರೆ ಸರಿ . 1 ನೇ ಆರೋಪಿ ನನ್ನ

ತಾಯಿಯ ಅಕ್ಕನ ಗಂಡ ಎಂದರೆ ಸರಿ . 1 ನೇ ಆರೋಪಿ ಮತ್ತು ಅವರ ಹೆಂಡತಿ ಮಕ್ಕಳೊಂದಿಗೆ ಚೆನ್ನಾಗಿ ಸಂಸಾರ ಮಾಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ . 2 ನೇ ಆರೋಪಿ ನನಗೆ ಪರಿಚಯ ಇಲ್ಲ ಎಂದರೆ ಸರಿ .

ನಾನು ಪೊಲೀಸರ ಮುಂದೆ ಎರಡು ಬಾರಿ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ . ಸದರಿ ಎರಡು ಹೇಳಿಕೆಗಳಲ್ಲಿ ಆರೋಪಿಗಳ ವಿರುದ್ಧ ಯಾವುದೇ ಅನುಮಾನವನ್ನು ವ್ಯಕ್ತ ಪಡಿಸಿಲ್ಲ ಎಂದರೆ ಸರಿ .

ದಿಃ 4-8-2021 ರಂದು ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ಈಗಲೂ ಸಹ ನನ್ನ ತಾಯಿ ಅಂದರೆ 3 ನೇ ಆರೋಪಿ ಒಬ್ಬಂಟಿಯಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ .

ದಿಃ 27-7-2021 ರಿಂದ 4-8-2021 ರವರೆಗೆ ನನ್ನ ತಂದೆಯ ಕೊಲೆಯ ಆರೋಪಿತರನ್ನು ದಸ್ತಗಿರಿ ಮಾಡಿರಲಿಲ್ಲ ಎಂದರೆ ಸರಿ . ಪೊಲೀಸರು ನನ್ನನ್ನು , ನನ್ನ ತಂಗಿಯರನ್ನು ಮತ್ತು ಸಂಬಂಧಿಕರನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿ . ಆಗಲೂ ಸಹ ನನ್ನ ತಂದೆಯ ಕೊಲೆಯ ಆರೋಪಿಗಳ ಬಗ್ಗೆ ಖಚಿತ ಮಾಹಿತಿ ಪೊಲೀಸರಿಗೆ ಸಿಕ್ಕಿರಿಲಿಲ್ಲ ಎಂದರೆ ಸರಿ .

ನನ್ನ ತಂದೆ ಮತ್ತು ತಾಯಿ ಒಟ್ಟಿಗೆ ಇದ್ದಾಗಲೂ ಸಹ ನನ್ನ ತಂದೆ ನಾಗೇಶ್ವರಮ್ಮ ಬಳಿ ಪೋನ್ ನಲ್ಲಿ ದಿನ ನಿತ್ಯ ಮಾತನಾಡುತ್ತಿದ್ದ ಎಂದರೆ ಸರಿ .

ಪೋಲೀಸರು ಹೇಳಿದ ಮೇರೆಗೆ ಮಾತ್ರ ಆರೋಪಿಗಳ ಬಗ್ಗೆ ನನಗೆ ವಿಷಯ ಗೊತ್ತಾಯಿತು ಎಂದರೆ ಸರಿ .

ನನ್ನ ತಂದೆಯ ಸಾವಿಗೂ ಆರೊಪಿಗಳಿಗೂ ಯಾವುದೇ ಸಂಬಂಧ ಇಲ್ಲ ಮತ್ತು ನಾನು ಪೊಲಪೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ. ಜಿ ಬಿ ಆರ್ ವಕೀಲರು ಹಾಜರಿದ್ದು ಮೇಲಿನ ಪಾಟೀ ಸವಾಲುಗಳನ್ನು ಅನುಸರಿಸುತ್ತೇನೆ ಎಂದು ನುಡಿದಿರುತ್ತಾರೆ .

**ಮರು ವಿಚಾರಣೆ ಇಲ್ಲ .**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.